ಕೆಂಪಾಗಿ ಹೆಣ್ಣು ಮಕ್ಕಳ ಹಾಗೆ ಕಾಣ್ತಾನೆ ನೋಡು, ಹೆಣ್ಣು ಮಗುವಾಗಿದ್ದರೆ 'ಲಕ್ಸ್ ಪಾಪು' ವಿನಂತೆ ಸಿನಿಮಾ ಹೀರೋಯಿನ್ ಆಗುತ್ತಿದ್ದನೇನೋ' ಎನ್ನುತ್ತಿದ್ದ.

ನೀನು ಏನನ್ನುತ್ತಿದ್ದೆಯೋ ನಿನಗೆ ನೆನಪಿದೆಯ ಅಮ್ಮ? 'ನನ್ನ ಮಗ ಬೆಣ್ಣೆ ಮುದ್ದೆ ಕಣೋ ತಮ್ಮ! ಹಿಡಿದುಕೊಂಡರೆ ಜಾರಿ ಹೋಗ್ತಾನೆ, ಅವನನ್ನು ತುಂಬಾ ಹುಷಾರಾಗಿ ನೋಡಿಕೊಳ್ಳಬೇಕು' ಎಂದು ನಗುತ್ತಿದ್ದೆ.

ನಿನ್ನ ಮಗನ ದೇಹ ಮಾತ್ರ ಬೆಣ್ಣೆಯಲ್ಲ; ಅವನ ಮನಸ್ಸು ಸಹ ಬೆಣ್ಣೆಯಂತೆ ಮೃದು ಅದನ್ನ ಸಹ ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ನಿಂಗೆ ಏಕಮ್ಮ ತಿಳಿಯಲಿಲ್ಲ?

'ಅಮ್ಮ, ಮಾವ ನನ್ನನ್ನು ಹಿಸುಕಿ ಹಾಕಿ ಬಿಡುತ್ತಿದ್ದಾನೆ, ನನಗೆ ಅವನು ಇಷ್ಟವಿಲ್ಲ' ಎಂದು ಆಗಲೇ ನಾನು ನಿನಗೆ ಹೇಳಿದೆ. ನೀನು ಏನಂದೆ ಗೊತ್ತೇ?

'ಲೋ ಮುದ್ದು, ನೀನೇನೋ ತಂಟೆ ಮಾಡಿದಂತೆ ಕಾಣುತ್ತೆ, ಮಾವ ನಿನ್ನ ಕೆನ್ನೆ ಹಿಂಡಿರಬಹುದು, ಅದಕ್ಕೆ ಹೀಗೆ ದೂರು ಹೇಳುವುದೇ?'ಎಂದು ನಕ್ಕುಬಿಟ್ಟೆ. ನಕ್ಕಾಗ ನಿನ್ನ ಮುಖ ನೋಡುವುದು ನನಗೆ ತುಂಬಾ ಇಷ್ಟ ಅಮ್ಮ.

ಮತ್ತೊಂದು ಸಲ ಹೀಗೆ ನಾನು ನಿನಗೆ ಹೇಳಿದೆ. ಆಗ ಮಾವ ಕೂಡ ಅಲ್ಲೇ ಇದ್ದ.

'ಹೌದಕ್ಕ, ಸುಮ್ಮನೆ ತಮಾಷೆಗೆ ಅಂಡಿನ ಮೇಲೆ ಹೀಗೆ ಒಂದೇಟು ಕೊಟ್ಟೆ ಅಷ್ಟೇ, ಆದರೂ ನಿನ್ನ ಮಗ ಇಷ್ಟೊಂದು ಸೂಕ್ಷ್ಮವಾದರೆ ನಾಳೆ ಶಾಲೆಗೆ ಹೋದರೆ ಹೇಗೆ ನಿಭಾಯಿಸಿಕೊಂಡು ಬರ್ತಾನೋ ಏನೋ..?' ಅಂದ.

ನೀನು ನಕ್ಕು ಬಿಟ್ಟೆ. ಮಾವ ಕೂಡ ನಕ್ಕು ಬಿಟ್ಟಾಮ್ಮ. ಆದರೆ ಮಾವ ಹಾಗೆ ನಕ್ಕರೆ ಚೆನ್ನಾಗಿರಲ್ಲಮ್ಮ, ನನಗೆ ಭಯವಾಗಿತ್ತು. ನೀನು ಇಲ್ಲದೆ ಇರುವಾಗ ಮಾವ ತುಂಬಾ ನಗ್ತಿದ್ದಾಮ್ಮ. ಆಗ ನನಗೆ ತುಂಬಾ ಭಯ ಆಗ್ತಿತ್ತಮ್ಮ.

ನಾನು ಐದಾನೆ ಕ್ಲಾಸಿಗೆ ಬಂದೆ, ಆಗ ಶಾಲೆಯ ಟೀಚರ್ ನಿನಗೆ ದೂರು ಕಳುಸಿದರು.

'ಏನ್ರೀ ನಿಮ್ಮ ಹುಡುಗನಿಗೆ ಸ್ವಲ್ಪಾನು ಸ್ಥಿಮಿತವಾಗಿರಲು ಕಲಿಸಿಲ್ಲ. ಒಂದು ಅರ್ಧ ಗಂಟೆ ಒಂದು ಕಡೆ ಸ್ಥಿಮಿತವಾಗಿ ಕುಳಿತುಕೊಳ್ಳಲಾರ. ಗಳಿಗೆಗೊಂದು ಸಲ ಎದ್ದು ನಿಲ್ಲುತ್ತಾನೆ. ಯಾಕೆ ಹೀಗೆ ಎಂದು ಕೇಳಿದರೆ ಕಣ್ಣು ಕೆಂಪಗೆ ಮಾಡಿಕೊಂಡು ಅಳತೊಡಗುತ್ತಾನೆಯೇ ಹೊರತು ಏನೂ ಹೇಳುವುದಿಲ್ಲ. ಸ್ವಲ್ಪವೂ ಸ್ಥಿಮಿತವಿಲ್ಲದ ಅಳು ಮೋರೆಯ ಹುಡುಗ, ಪಾಠ ಮಾಡುತ್ತಿರುವಾಗಲು ನಿಂತುಕೊಂಡು ಬರೆಯುತ್ತೇನೆ ಎನ್ನುತ್ತಾನೆ. ಯಾವಾಗಲೂ ಏನಾದರೂ ಯೋಚಿಸುತ್ತಲೇ ಇರುತ್ತಾನೆ. ಏನು ಯೋಚಿಸುತ್ತಾನೋ ಏನೋ ತಿಳಿಯದು, ಹೀಗೆ ಆದರೆ ಮುಂದಿನ ತರಗತಿಗಳಿಗೆ ಹೋದಾಗ ತುಂಬಾ ಕಷ್ಟ ಆಗುತ್ತೆ' ಎಂದರಾಕೆ. ತಂದೆ ತಾಯಿಯರ ಆ ಮೀಟಿಂಗ್ ನಲ್ಲಿ ನೀನು ತಲೆ ತಗ್ಗಿಸಿಕೊಂಡೆ.

ಮನೆಗೆ ಬಂದ ನಂತರವಾದರೂ 'ತರಗತಿಯಲ್ಲಿ ಗಳಿಗೆಗೊಮ್ಮೆ ಹಾಗೇಕೆ ಎದ್ದು ನಿಲ್ಲುವೆ?' ಅಂತ ಕೇಳ್ತೀಯಾಂತ ಅಂದುಕೊಂಡೆನಮ್ಮ. ನೀನು ಕೇಳಿದರೆ ಎಲ್ಲಾ ಹೇಳಿ ಬಿಡೋಣಾವೆಂದುಕೊಂಡೆ, ಆದರೆ ನೀನು ಕೇಳಲೇ ಇಲ್ಲ. ಅದಕ್ಕೆ ಬದಲಾಗಿ ನೀನು ಚೆನ್ನಾಗಿ ಓದದೆ ಇದ್ದರೆ ಪ್ರೋಗ್ರೆಸ್ ರಿಪೋರ್ಟ್ ಗೆ ಸಹಿ ಮಾಡುವುದಿಲ್ಲ, ಹಾಸ್ಟೆಲ್ ಗೆ ಸೇರಿಸಿ ಬಿಡ್ತೀವಿ ಅಂತ ಹೆದರಿಸಿದಿರೇ ಹೊರತಾಗಿ ಯಾಕೆ ಹೀಗೆ ಮಾಡುತ್ತಿ, ಯಾಕೆ ಎದ್ದು ನಿಲ್ಲುತ್ತಿಯಾ ಎಂದು ಕೇಳಲೇ ಇಲ್ಲಮ್ಮ.

ಹಾಸ್ಟೆಲ್ ಗೆ ಕಳುಹಿಸಿ ಬಿಟ್ಟಿದ್ದರಾದರೂ ಸರಿ ಹೋಗುತ್ತಿತ್ತೇನೊಮ್ಮ, ಹಾಗೆ ಮಾಡಿದರೆ ಚೆನ್ನಾಗಿರುವುದೆಂದೆ ನಾನು ಮತ್ತೂ ಓದುವುದನ್ನು ಕಡಿಮೆ ಮಾಡಿದೆ. ಇಷ್ಟಕ್ಕೂ ನಾನು ಯಾಕೆ ಹಾಗೆ ಎದ್ದು ನಿಲ್ಲುತ್ತಿದ್ದೇನೋ ನಿನಗೆ ಗೊತ್ತಾ ಅಮ್ಮ? ಆಂ... ಆಗ ಹೇಳಲಿಲ್ಲವಾಗಲಿ, ಈಗ ಹೇಳಬಲ್ಲೆ.

ನಮ್ಮ ಆ ಚಿಕ್ಕ ಮಾವ ತನ್ನ ಜನನಾಂಗವನ್ನು ನನ್ನ ಮುಡ್ಡಿಯಲ್ಲಿ ಬಲವಂತವಾಗಿ ತುರುಕುತಿದ್ದನಮ್ಮ. ಎಷ್ಟೋ ಸಲ ನೋವಿನಿಂದ ಆ ಗಳಿಗೆಯಲ್ಲಿ ಸತ್ತು ಹೋಗುತ್ತೇನೇನೋ ಅಂದುಕೊಳ್ಳುತಿದ್ದೆನಮ್ಮ. ನಾನು ಗಟ್ಟಿಯಾಗಿ ಕೂಗದಂತೆ ತನ್ನ ಅಂಗೈನಿಂದ ನನ್ನ ಬಾಯಿ ಮುಚ್ಚುತ್ತಿದ್ದ. ತುಂಬಾ ರಕ್ತ ಬರುತ್ತಿತ್ತು. ಆ ನೋವು ಕಡಿಮೆಯಾಗಲು ಒಂದು ವಾರವಾದರೂ ಹಿಡಿಸುತಿತ್ತು. ಅಷ್ಟರಲ್ಲೇ ಮತ್ತೊಮ್ಮೆ ಹಾಗೆ ಮಾಡುತ್ತಿದ್ದ, ನಾನು ತುಂಬಾ ನೋವಿನಿಂದ ತರಗತಿಯಲ್ಲಿ ಕುಳಿತುಕೊಳ್ಳಲಾಗುತ್ತಿರಲಿಲ್ಲವಮ್ಮ. ಅದಕ್ಕೆ ಆಗಾಗ ಹಾಗೆ ನಿಂತು ಬಿಡುತ್ತಿದ್ದೆ.

ಯಾರಾದರೂ ಏಕೆ ಎಂದು ಕೇಳಿದರೆ ಆ ಹಿಂಸೆಯೆಲ್ಲ ನೆನಪಿಗೆ ಬರುತ್ತಿತ್ತಮ್ಮ. ಹೆದರಿಕೆಯಿಂದ ಮೈಯೆಲ್ಲಾ ನಡುಕ ಉಂಟಾಗುತ್ತಿತ್ತು. ಅಳು ಬರುತ್ತಿತ್ತು.

ಒಂದು ಸಲ ನಾನು ನಿನ್ನ ಬಳಿ ಬಂದು 'ಅಮ್ಮ ನನ್ನ ಅಂಡಿನ ಮೇಲೆ.... ಎಂದು ಹೇಳ ಹೊರಟಾಗ ನೀನು ಕೆನ್ನೆಗೆ ಒಂದೇಟು ಕೊಟ್ಟು ಏನದು ಅಂಡು ಗಿಂಡು ಅಂತ, ಅಂಥ ಕೆಟ್ಟ ಮಾತುಗಳನ್ನು ಹೇಳಬಾರದೆಂದು ಹೇಳಿದ್ದೀನಿ ತಾನೇ? ಅಮ್ಮ, ವರ್ಷ ತುಂಬುತ್ತಿರುವ ಮಕ್ಕಳಿಗೆ, ಎಲ್ಲಿ ನಿನ್ನ ಬಾಯಿ ತೋರಿಸು, ನಿನ್ನ ಕಣ್ಣು ಯಾವುದು? ಮೂಗು ಯಾವುದು! ನಿನ್ನ ಕಿವಿ ಯಾವುದು! ನಿನ್ನ ಕಾಲುಗಳು ಎಲ್ಲಿ! ಅಂತ ಪರಿಚಯ ಮಾಡಿಸಿ ಕೊಡುತ್ತೇವಲ್ಲಾ... ಎಲ್ಲಾ ನಮ್ಮ ಶರೀರದ ಅಂಗಾಂಗಗಳೇ ಅಲ್ವೇನಮ್ಮ? ಅದರಲ್ಲೂ ಪ್ರತಿ ಭಾಗಕ್ಕೂ ಒಂದೊಂದು ಹೆಸರಿದೆ ಮತ್ತೆ ಜನನಾಂಗವನ್ನು, ಅಂಡನ್ನು ತೋರಿಸಿ ಅದನ್ನು ಸರಿಯಾಗಿ ಏನನ್ನುತ್ತಾರೊ ಒಳ್ಳೆಯ ಭಾಷೆಯಲ್ಲಿ ಯಾಕೆ ಹೇಳಿಕೊಡುವುದಿಲ್ಲಮ್ಮ? ಅದೇನೂ ಆಡಬಾರದ ಮಾತುಗಳನ್ನು ಆಡಿದಂತೆ ಏಕಮ್ಮ ಹಾಗೆ ಬಚ್ಚಿಡುತ್ತಾರೆ?

ತಂದೆ ತಾಯಿಗಳು ಬಚ್ಚಿಟ್ಟ ವಿಷಯಗಳನ್ನು ಮಕ್ಕಳು ಸ್ನೇಹಿತರ ಬಳಿ ತಿಳಿದೂ ತಿಳಿಯದ ಕೆಟ್ಟ ಮಾತುಗಳಲ್ಲಿ ಕಲಿತುಕೊಳ್ತಾರೆ. ನಾನೇನು ನಿನಗೆ ಪಾಠ ಹೇಳುತ್ತಿಲ್ಲಮ್ಮ, ನಡೆದುದ್ದನ್ನೆಲ್ಲಾ ನಿನ್ನೊಡನೆ ಹಂಚಿಕೊಳ್ಳುತ್ತಿದ್ದೆನಮ್ಮ ಅಷ್ಟೆ. ಹೋಗಲಿ ಬಿಡು, ನೀನು ಕೂಡ ಆಗ ಚಿಕ್ಕವಳೇ ಅಲ್ವಾ? ಈಗಿನ ತಾಯಂದಿರಿ ಗಿರುವಷ್ಟು ಅವಗಾಹನೆ ಆ ಕಾಲದಲ್ಲೂ ನಿಮಗಿರುತ್ತಿರಲಿಲ್ಲ, ನಿಜ ಒಪ್ಪಿ ಕೊಳ್ಳುತ್ತೇನೆ. ಆದರೆ ಅಮ್ಮ ಒಂದು ಸಲ ನೀನು ನನ್ನ ಚಡ್ಡಿ ತುಂಬಾ ರಕ್ತದ ಕಲೆಗಳಿರುವುದನ್ನು ನೋಡಿದೆ..

'ಕತ್ತೆ, ಮಾವಿನ ಹಣ್ಣು ಇದೇಂತ ಒಂದೇ ಸಮನೆ ತಿನ್ನುವುದೇನೋ? ಹಾಗೆ ಹೆಚ್ಚಾಗಿ ತಿಂದರೆ ಉಷ್ಣವಾಗಿ ರಕ್ತ ಬೀಳುವುದೆಂದು ನಾನು ಹೇಳಿವೇ?' ಎನ್ನುತ್ತಾ ನೀನು ಮಾವಿನ ಹಣ್ಣಿನ ಬುಟ್ಟಿಯನ್ನು ಬಚ್ಚಿಟ್ಟುಬಿಟ್ಟೆ. ನನಗೆ ತುಂಬಾ ಅಳು ಬಂದು ಬಿಡ್ತಮ್ಮ. ಹೇಗಿದ್ದರೂ ನೀನು ರಕ್ತದ ಕಲೆ ನೋಡಿದೆಯಲ್ಲಾ ಹೇಳಿಬಿಡೋಣವೆಂದು ಪ್ರಯತ್ನಿಸುವಷ್ಟರಲ್ಲಿ ನಾಳೆಯಿಂದ ನಿನಗೆ ಮಾವಿನ ಹಣ್ಣು ಸಿಗುವುದಿಲ್ಲವೆಂದು ಅಳುತ್ತಿರುವೆಯಾ. ಎಷ್ಟು ಅತ್ತರೂ ನಿನಗೆ ಹಣ್ಣು ಕೊಡುವುದಿಲ್ಲವಾಗಲೀ... ಹೋಗಿ ಮಾವನ ಹತ್ತಿರ ಮಲಗಿಕೊ... ಎಂದೆಯೇ ಹೊರತು ನಾನು ವಿಷಯ ಹೇಳಲು ಅವಕಾಶವೇ ಕೊಡಲಿಲ್ಲವಲ್ಲಮ್ಮ.

ಬೇಡಮ್ಮ ... ಕಂಬನಿ ಸುರಿಸಬೇಡಮ್ಮ, ಅತ್ತರೆ ನೀನು ಚೆನ್ನಾಗಿರುವುದಿಲ್ಲ ಎಂದಲ್ಲ. ಆದರೆ ನಾನು ನೋಡಲಾರೆ. ನಾನೇನು ನಿನ್ನನ್ನು ಹೀಗೇಕೆ ಮಾಡಿದೆ ಎಂದು ಕೇಳುತ್ತಿಲ್ಲಮ್ಮ, ಅತ್ಯಂತ ಭದ್ರವಾದ ಬುನಾದಿಯಿರುವ ಬಾಳಿನಲ್ಲಿ ಚಾಪೆಯ ಕೆಳಗಿನ ನೀರಿನಂತೆ ಹೆದರಿಕೆ ಎನ್ನುವುದು ಯಾವಾಗ ಪ್ರವೇಶಿಸುವುದೋ ತಿಳಿಯುವುದಿಲ್ಲಮ್ಮ. ಅದನ್ನು ಯಾರಿಗೂ ಹೇಳಿಕೊಳ್ಳಲಾಗುವುದಿಲ್ಲಮ್ಮ.

ಅಮ್ಮ ಆ ಹಿಂಸೆ ಎಷ್ಟು ದಿನ,ಎಷ್ಟು ತಿಂಗಳು, ಎಷ್ಟು ವರ್ಷಗಳು ಸಾಗಿತೋ ಲೆಕ್ಕವೇ ಇಲ್ಲಮ್ಮ, ನಾನು ಹತ್ತನೇ ತರಗತಿ ಮುಗಿಸುವ ವೇಳೆಗೆ ಮಾವನ ಮತ್ತಿಬ್ಬರು ಸ್ನೇಹಿತರು ಸಹ ಬರುತ್ತಿದ್ದರು. ಅವರೆಲ್ಲ ನನ್ನೊಂದಿಗೆ ಏನು ಮಾಡುತ್ತಿದ್ದರೆಂದು... ಭಯಂಕರವಾದ ಚಂಡಾಲ ಕರ್ಮವನ್ನು ಅನುಭವಿಸಿದ ನಾನು ನನ್ನ ಈ ದರಿದ್ರ ಬಾಯಿಂದ ನಿನಗೆ ಹೇಳಲಾರೆನಮ್ಮ.

'ಲೋ ಬಂಗಾರ, ರಸಪುರಿ ಇದನ್ನು ನೀನು ಯಾರಿಗೂ ಹೇಳಲಾರೆ, ಒಂದು ವೇಳೆ ಹೇಳಿದರೂ ನಿನ್ನನ್ನೇ ಹಿಡಿದು ಒದೀತಾರೆ. ಮನೆಯಿಂದ ಹೊರಗೆ ಹಾಕುವರೇ ಹೊರತಾಗಿ ನನ್ನನ್ನು ಏನೂ ಅನ್ನುವುದಿಲ್ಲ, ಒಂದು ವೇಳೆ ನನ್ನನ್ನೇ

## ಬರಗಾಲ

ಬರಗಾಲದ ಬಗ್ಗೆ
ಬರೆಯಬೇಕೆನಿಸಿದಾಗ
ಕಣ್ಣೀರು ಕೂಡಾ
ಬತ್ತಿ ಹೋಯಿತು.

★ ದೇವಕಿಸುತ

